ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಸಿ.ಸಿ.ನಂ.**67/2018.**

ದಿನಾಂಕ:**06.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಪ್ರಭಾಕರ | ಚಾಸಾ- 2<br>ಪ್ರಾಸಾ-2 |
| ತಂದೆಯ ಹೆಸರು | ಮರುಳಸಿದ್ದಯ್ಯ | |
| ವಯಸ್ಸು (ವರ್ಷಗಳಲ್ಲಿ) | 52 | |
| ಉದ್ಯೋಗ | ಇಲೆಕ್ಟ್ರಿಕಲ್ ವರ್ಕ್ | |
| ವಾಸ | ಕಡೂರು | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:

ಚಾಸಾ 1, 3, 4 ರವರ ಪರಿಚಯವಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈಗ ನೋಡುತ್ತಿರುವ ದಾಖೆಗಳಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಗಳು ನೋಟೀಸು, ಸ್ಕೆಚ್, ನಿಪಿ2 ರ ಮಹಜರ್ ಆಗಿರುತ್ತದೆ. ನಿಪಿ 2 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂದು, ನೋಟೀಸ್ ಅನ್ನು ನಿಪಿ 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ6 ಎ ಎಂದು, ಸ್ಕೆಚ್ ಅನ್ನು ನಿಪಿ 7 ಎಂದು ಸಾಕ್ಷಿಯ ಸಹಿಯನ್ನುನಿಪಿ 7 ಎ ಎಂದು ಗುರುತಿಸಲಾಯಿತು ಹಾಗೂ ಪೋಟೋಲ್ಲಿರುವುದು ನಾನೇ ಸದರಿ ಪೋಟೋಗಳನ್ನು ನಿಪಿ 3 ರಿಂದ 5 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನಿಪಿ 2 ರಿಂದ 7 ರ ವಿಚಾರಗಳು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲು: ಮಾನ್ಯ ಸ ಸ ಅ ರವರಿಂದ ಃ

ದಿ:07.10.2017 ರಂದು ಸ್ಥಳ ಮಹಜರಿಗೆ ಪಂಚರಾಗಿ ಹಾಜರಾಗಲು ನಿಪಿ 6 ರಂತೆ ನನಗೆ ನೋಟೀಸು ನೀಡಲಾಗಿತ್ತು ಎಂದರೆ ಸರಿಯಲ್ಲ. ಅದರಂತೆ ಅದೇ ದಿನ ಬೆ.11 ರಿಂದ ಮ.1 ರ ವರೆಗೂ ನಿಮ್ಮ ಮತ್ತು ಚಾಸಾ 1, 3, 4 ರವರ ಸಮಕ್ಷಮ ನಿಪಿ 2 ರಂತೆ ಮಹಜರ್ ಮಾಡಿ ನಿಪಿ 3, 4, 5 ರಂತೆ ಪೋಟೋ ತೆಗೆದು ಅದರಲ್ಲಿ ಕಾಣುವ ಕಲ್ಲು ಮತ್ತು ಛತ್ರಿ

ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ವೇಳೆ ನಿಪಿ 7 ರ ಸ್ಕೆಚ್ ತಯಾರು ಮಾಡಲಾಯಿತು ಎಂದರೆ ಸರಿಯಲ್ಲ. ಸದರಿ ನಿಪಿ 2 ರಿಂದ 7 ರ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹಃ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u> ಇರುವುದಿಲ್ಲ.
<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.